ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

## ಬಹುಮುಖಿ – 2

# ಬಹುವರ್ಗ ಬೋಧನೆ

## ಸಂಚಿಕೆ – 3

## ಭಾಗ – 2

## ಮೂರು ಮತ್ತು ಐದನೇ ತರಗತಿ

## ಪ್ರಥಮ ತ್ರೈಮಾಸಿಕ ಅವಧಿಗೆ

ಡಿ.ಎಸ್.ಇ.ಆರ್.ಟಿ. ಬೆಂಗಳೂರು–85.

# ಮುನ್ನುಡಿ

**ಪ್ರಾ**ಥಮಿಕ ಶಿಕ್ಷಣವನ್ನು ಸಾರ್ವತ್ರೀಕರಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚು ಹೆಚ್ಚು ಶಾಲೆಗಳನ್ನು ಪ್ರತಿ ಗ್ರಾಮಗಳಲ್ಲಿ ಪ್ರಾರಂಭಿಸುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಶಾಲೆಗಳಲ್ಲಿ ಬಹುವರ್ಗ ಬೋಧನೆ ಅನಿವಾರ್ಯ. ರಾಜ್ಯದ ಹೆಚ್ಚಿನ ಶಾಲೆಗಳಲ್ಲಿ ತರಗತಿಗೊಬ್ಬ ಶಿಕ್ಷಕನನ್ನು ನೇಮಿಸಲು ಹಲವಾರು ಕಾರಣಗಳಿಂದ ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಒಬ್ಬರೇ ಶಿಕ್ಷಕರು ಒಂದಕ್ಕಿಂತ ಹೆಚ್ಚು ತರಗತಿಗಳನ್ನು ಒಂದೇ ಅವಧಿಯಲ್ಲಿ ನಿರ್ವಹಿಸುವುದು ಅನಿವಾರ್ಯವಾಗಿದೆ. ಹೀಗೆ ತರಗತಿಗಳನ್ನು ನಿರ್ವಹಿಸುವಾಗ ಸಮಯ ವ್ಯರ್ಥವಾಗದಂತೆ ಬೇರೆ ಬೇರೆ ತರಗತಿಗಳ ವಿವಿಧ ವಯೋಮಾನದ ಬೇರೆ ಬೇರೆ ಕಲಿಕಾ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳನ್ನು ಕಲಿಕಾ ಅಭ್ಯಾಸಗಳಲ್ಲಿ ಸದಾ ನಿರತರಾಗುವಂತೆ ಮಾಡುವುದು ಒಂದು ಸವಾಲಾಗಿದೆ. ಈ ಸವಾಲಿಗೆ ಶಾಶ್ವತ ಪರಿಹಾರ ನೀಡುವಲ್ಲಿ ರಾಜ್ಯ ಹಾಗೂ ರಾಷ್ಟ್ರಗಳಲ್ಲಿ ನಿರಂತರ ಪ್ರಯತ್ನಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಸಾಧನೆ ಶ್ಲಾಘನೀಯವಾಗಿದೆ. ಈ ಹಿಂದೆ ನೀಡಲಾದ ಚೈತನ–1, ಬಹುಮುಖಿ–1 ತರಬೇತಿಗಳಲ್ಲಿ ಬಹುವರ್ಗ ಬೋಧನೆ ಬಗ್ಗೆ ಮಾಹಿತಿ ನೀಡಲಾಗಿದೆ. ಬಹುವರ್ಗ ಬೋಧನೆಯಲ್ಲಿ ತೊಡಗಿರುವ ಶಿಕ್ಷಕರಿಗೆ ಇನ್ನೂ ಹೆಚ್ಚು ನೆರವಾಗಲೆಂಬ ಉದ್ದೇಶದಿಂದ ಸವಿವರವಾದ ಕೈಪಿಡಿಯನ್ನು ರಚಿಸಲಾಗಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಸಾಮರ್ಥ್ಯಗಳ ಕಲಿಕೆಗೆ ಪೂರಕವಾದ ಕಲಿಕಾ ಸಾಮಗ್ರಿಗಳಾದ ಹಾಡು, ಕಥೆ ಹಾಗೂ ಚಟುವಟಿಕೆಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ತರಗತಿ ಕೋಣೆಗಳಲ್ಲಿ ಅನುಷ್ಠಾನಗೊಳಿಸಿದರೆ ವಿವಿಧ ಸ್ತರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖಾಧಿಕಾರಿಗಳ, ಶಿಕ್ಷಣ ತಜ್ಞರ ಹಾಗೂ ಸಂಪನ್ಮೂಲ ಶಿಕ್ಷಕರ ಶ್ರಮ ಸಾರ್ಥಕವಾಗುತ್ತದೆ.

ಈ ಕೈಪಿಡಿಯು ಒಬ್ಬ ಸಾಮಾನ್ಯ ಶಿಕ್ಷಕನನ್ನು ಆಧಾರವಾಗಿಟ್ಟುಕೊಂಡು ರಚಿಸಲ್ಪಟ್ಟಿದ್ದು ಇದೇ ಕೊನೆಯೆಂದು ನಾವು ಭಾವಿಸಿಲ್ಲ. ತಾವು ಬೋಧಿಸುವಾಗ ಅಲ್ಪಸ್ವಲ್ಪ ಬದಲಾವಣೆಗೆ ಅವಕಾಶ ಇದೆ. ನಿಮ್ಮ ಸಲಹೆ ಸೂಚನೆಗಳು ಎಂದಿನಂತೆ ತಲುಪುತ್ತವೆ ಎಂಬ ನಂಬಿಕೆ ನಮ್ಮದು.

**ಶುಭ ಹಾರೈಕೆಯೊಂದಿಗೆ**

ಸ್ಥಳ : ಬೆಂಗಳೂರು
ದಿನಾಂಕ : 12–4–2006



**ನಿರ್ದೇಶಕರು**
ಡಿ.ಎಸ್.ಈ.ಆರ್.ಟಿ.
ಬೆಂಗಳೂರು.

## ಪರಿಕಲ್ಪನೆ - ಮಾರ್ಗದರ್ಶನ

**ಶ್ರೀ ತ.ಮ. ವಿಜಯ ಭಾಸ್ಕರ್,** ಪ್ರಧಾನ ಕಾರ್ಯದರ್ಶಿಗಳು
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ

**ಶ್ರೀ ಡಿ. ಜಗನ್ನಾಥರಾವ್**
ನಿವೃತ್ತ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ., ಬೆಂಗಳೂರು.

**ಶ್ರೀ ಚಿದ್ರೆ ಶಂಕ್ರಯ್ಯ ಸ್ವಾಮಿ**
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ., ಬೆಂಗಳೂರು.

**ಶ್ರೀಮತಿ ಪಿ. ಶಾರದಮ್ಮ**
ನಿವೃತ್ತ ಸಹ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ., ಬೆಂಗಳೂರು.

## ಸಾಹಿತ್ಯ ರಚನಾ ಸಂಪನ್ಮೂಲ ತಂಡ

01 **ಶ್ರೀ ಬಿ.ಕೆ. ಹುಚ್ಚೇಗೌಡ**
ಕ್ಷೇತ್ರ ಸಂಪನ್ಮೂಲ ವ್ಯಕ್ತಿ
ಕ್ಷೇತ್ರ ಸಂಪನ್ಮೂಲ ಕೇಂದ್ರ ಕುಣಿಗಲ್, ತುಮಕೂರು ಜಿಲ್ಲೆ.

02 **ಶ್ರೀ ಎಂ. ತಿಮ್ಮರಾಯಿ ಗೌಡ**
ಕ್ಷೇತ್ರ ಸಂಪನ್ಮೂಲ ವ್ಯಕ್ತಿ
ಕ್ಷೇತ್ರ ಸಂಪನ್ಮೂಲ ಕೇಂದ್ರ ನಾಗಮಂಗಲ, ಮಂಡ್ಯ ಜಿಲ್ಲೆ.

03 **ಕು॥ ಜಿ.ಹೆಚ್. ರಶ್ಮಿ**
ಸಹ ಶಿಕ್ಷಕರು
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,
ಚೀಲೂರು, ಹೊನ್ನಾಳಿ ತಾಲ್ಲೂಕು,
ದಾವಣಗೆರೆ ಜಿಲ್ಲೆ.

04 **ಶ್ರೀ ಇಬ್ರಾಹಿಂ ಹೆಚ್. ಎಣ್ಣೇರ್** ಸ॥ ಶಿ॥
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,
ಮಾದನ ಬಾವಿ, ಹೊನ್ನಾಳಿ ತಾಲ್ಲೂಕು
ದಾವಣಗೆರೆ ಜಿಲ್ಲೆ.

05 **ಶ್ರೀ ಮಹೇಶ್ವರಪ್ಪ,**
ಸಹ ಶಿಕ್ಷಕರು
ದೊಡ್ಡತ್ತಿನ ಹಳ್ಳಿ, ಹೊನ್ನಾಳಿ ತಾಲ್ಲೂಕು
ದಾವರಣಗೆರೆ ಜಿಲ್ಲೆ.

06 **ಶ್ರೀ ರಾಮಚಂದ್ರಯ್ಯ ಟಿ.ಎಸ್.** ಸ॥ ಶಿ॥
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಚಿಕ್ಕಮಾವತ್ತೂರು, ಕುಣಿಗಲ್ ತಾ॥
ತುಮಕೂರು ಜಿಲ್ಲೆ.

07 **ಶ್ರೀ ನಾರಾಯಣಪ್ಪ ಕೆ.ಎಸ್.** ಸ॥ ಶಿ॥
ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ
ಬಸವನಗುಡಿ ಪಾಳ್ಯ, ಮಾಗಡಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

08 **ಶ್ರೀಮತಿ ಜಯಶ್ರೀ ಫ. ರಂಗರೇಜ**
ಉಪನ್ಯಾಸಕರು,
ಡಯಟ್ ಇಳಕಲ್, ಬಾಗಲಕೋಟೆ ಜಿಲ್ಲೆ.

09 **ಶ್ರೀ ಆರ್. ಹೊನ್ನಾಚಾರ್**
ಕ್ಷೇತ್ರ ಸಂಪನ್ಮೂಲ ವ್ಯಕ್ತಿ
ದೇವನಹಳ್ಳಿ ತಾ॥ ಬೆಂ. ಗ್ರಾ. ಜಿಲ್ಲೆ.

10 **ಶ್ರೀ ಕೆ. ಕಾಂತರಾಜು**
ಸಮೂಹ ಸಂಪನ್ಮೂಲ ವ್ಯಕ್ತಿ
ಸಮೂಹ ಸಂಪನ್ಮೂಲ ಕೇಂದ್ರ
ದೇವನಹಳ್ಳಿ ತಾ॥ ಬೆಂಗಳೂರು ಗ್ರಾಮಾಂತರ ಜಿಲ್ಲೆ

11 **ಶ್ರೀ ಜಿ. ಹರೀಶ್** ಸ॥ ಶಿ॥
ಸರ್ಕಾರಿ ಕಿರಿಯ ಮಾದರಿ ಪ್ರಾಥಮಿಕ ಶಾಲೆ
ದೇವನ ಹಳ್ಳಿ ತಾಲ್ಲೂಕು
ಬೆಂಗಳೂರು ಗ್ರಾಮಾಂತರ ಜಿಲ್ಲೆ.

12 **ಶ್ರೀ ಆರ್. ನಾರಾಯಣ ಸ್ವಾಮಿ** ಸ॥ ಶಿ॥
ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆ
ಬಾಶೆಟ್ಟಿಹಳ್ಳಿ, ದೊಡ್ಡಬಳ್ಳಾಪುರ ತಾ॥
ಬೆಂಗಳೂರು ಗ್ರಾಮಾಂತರ ಜಿಲ್ಲೆ

13 **ಶ್ರೀಮತಿ ಮಂಗಳ** ಸ॥ ಶಿ॥
ಸರ್ಕಾರಿ ಹಿರಿಯ ಉರ್ದು ಪ್ರಾಥಮಿಕ ಶಾಲೆ
ಸುಗಟೂರು ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ.

## ಕಾರ್ಯಕ್ರಮ ಆಯೋಜನೆ - ನಿರ್ವಹಣೆ

**ಶ್ರೀಮತಿ ಆರ್. ಮಂಜುಳ**
ಹಿರಿಯ ಸಹಾಯಕ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ. ಬೆಂಗಳೂರು.

**ಶ್ರೀಮತಿ ಬಿ.ವಿ. ಹೇಮಲತ**
ಸಹಾಯಕ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ. ಬೆಂಗಳೂರು.

# ಪ್ರಸ್ತಾವನೆ

*ಪ್ರಿಯ ಶಿಕ್ಷಕ ಬಂಧುಗಳೇ....................*

ಬಹುವರ್ಗ ಬೋಧನೆಗೆ ಸಂಬಂಧಿಸಿದಂತೆ ಈ ಹಿಂದೆ ತಾವು ಬಹುಮುಖಿ–1 ತರಬೇತಿಯನ್ನು ಪಡೆದಿದ್ದೀರಿ. ಅದು ಬಹುವರ್ಗ ಬೋಧನೆಯ ಶಿಕ್ಷಕರಿಗಾಗಿ ಸಿದ್ಧಪಡಿಸಿದ ಮೊದಲ ಸಂಚಿಕೆ. ಬಹುವರ್ಗ ಬೋಧನೆಯಲ್ಲಿ ಶಿಕ್ಷಕರು ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರವನ್ನು ನೀಡುವಲ್ಲಿ ಬಹುಮುಖಿ–1 ಸಫಲವಾಗಿದೆ. ಆದಾಗ್ಯೂ ಬಹುವರ್ಗ ಬೋಧನೆಯಲ್ಲಿ ತೊಡಗಿರುವ ಶಿಕ್ಷಕರಿಗೆ ಇನ್ನಷ್ಟು ನೆರವಾಗುವ ಹಾಗೂ ಕಲಿಕೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ಉದ್ದೇಶದಿಂದ ಒಂದು ತ್ರೈಮಾಸಿಕ ಅವಧಿಯಲ್ಲಿ ತರಗತಿವಾರು, ವಿಷಯವಾರು ಆಯೋಜಿಸಿಕೊಳ್ಳಬೇಕಾದ ಶಾಲಾ ಚಟುವಟಿಕೆಗಳ ಕುರಿತು ಸಮಗ್ರ ವಿವರಗಳನ್ನೊಳಗೊಂಡ "ಬಹುಮುಖಿ–2"ರ ಮಾಲಿಕೆಯ ಸಂಚಿಕೆಗಳನ್ನು ಹೊರತರಲಾಗಿದೆ.

ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಸಂಚಿಕೆಗಳನ್ನು ಸಿದ್ಧಪಡಿಸಲಾಗಿದೆ.

- ಒಂದರಿಂದ ಐದನೇ ತರಗತಿಗಳಿಗೆ ಲಭ್ಯವಿರುವ ಶಿಕ್ಷಕರ ಸಂಖ್ಯೆ.
- ಕಲಿಕೆಯನ್ನು ಪರಿಣಾಮಕಾರಿಗೊಳಿಸಲು ಪೂರಕವಾಗುವಂತೆ ತರಗತಿಗಳ ಸಂಯೋಜನೆ ಮತ್ತು ಹೊಂದಾಣಿಕೆ.
- ಒಂದನೇ ತ್ರೈಮಾಸಿಕ ಅವಧಿಗೆ ಲಭ್ಯವಿರುವ ಅಂದಾಜು ಕೆಲಸದ ದಿನಗಳು.
- ಪ್ರತಿ ತರಗತಿವಾರು / ವಿಷಯವಾರು / ಭಾಗ – ಎ ಮತ್ತು ಭಾಗ – ಬಿ ಗಳಿಗೆ ಸಂಬಂಧಿಸಿದಂತೆ ಮೊದಲ ತ್ರೈಮಾಸಿಕ ಅವಧಿಗೆ ನಿಗದಿಪಡಿಸಿರುವ ಪಠ್ಯವಸ್ತು / ಪಾಠಗಳು.
- ಪಠ್ಯವಸ್ತುವನ್ನು ಪೂರೈಸಲು ತರಗತಿವಾರು, ವಿಷಯವಾರು ನಿಗದಿಪಡಿಸಲಾದ ಅವಧಿಗಳು.
- ಪ್ರತಿ ವಿಷಯದಲ್ಲಿ ಪಾಠವಾರು ಕಲಿಕಾಂಶಗಳು / ಸಾಮರ್ಥ್ಯಗಳು ಮತ್ತು ಕ್ಲಿಷ್ಟತೆಯ ಮಟ್ಟವನ್ನಾಧರಿಸಿ ಬಳಸಿಕೊಳ್ಳಬಹುದಾದ ನೇರ ಬೋಧನಾ ಅವಧಿಗಳು ಹಾಗೂ ಸ್ವಕಲಿಕೆಯ ಅವಧಿಗಳು.
- ಭಾಗ – ಬಿ ಯಲ್ಲಿನ ವಿಷಯಗಳಾದ ಜೀವನ ವಿಜ್ಞಾನ, ಸಾ.ಉ.ಉ.ಕಾ/ಲಲಿತಕಲೆ ಮೌಲ್ಯ ಶಿಕ್ಷಣ, ಮುಂತಾದ ಅಂಶಗಳಿಗೆ ನೀಡಬೇಕಾದ ಸೂಕ್ತ ಪ್ರಾತಿನಿಧ್ಯ.
- ಕೇಳಿ – ಕಲಿ, ಚುಕ್ಕಿ ಚಿನ್ನ, ಚಿಣ್ಣರ ಚುಕ್ಕಿ ಮೊದಲಾದ ರೇಡಿಯೋ ಕಾರ್ಯಕ್ರಮಗಳಿಗೆ ತರಗತಿವಾರು ಅವಧಿಗಳ ಹಂಚಿಕೆ.
- ಸಾಮರ್ಥ್ಯಗಳ ಹೊಂದಾಣಿಕೆಯ ಸಾಧ್ಯಾಸಾಧ್ಯತೆ.
- ಸಂಚಿಕೆ 1ರಲ್ಲಿ ಒಬ್ಬ ಶಿಕ್ಷಕ 1 ರಿಂದ 5 ತರಗತಿಗಳನ್ನೂ, ಸಂಚಿಕೆ – 2ರಲ್ಲಿ ಇಬ್ಬರು ಶಿಕ್ಷಕರು 5 ತರಗತಿಗಳನ್ನೂ, 3ರಲ್ಲಿ ಮೂರು ಜನ ಶಿಕ್ಷಕರು 5ತರಗತಿಗಳನ್ನೂ ಹಾಗೂ ಸಂಚಿಕೆ – 4ರಲ್ಲಿ ನಾಲ್ಕು ಜನ ಶಿಕ್ಷರು 5 ತರಗತಿಗಳನ್ನೂ ಪರಿಣಾಮಕಾರಿಯಾಗಿ ನಿರ್ವಹಿಸುವ ಬಗ್ಗೆ ಕಾರ್ಯಸೂಚಿಯನ್ನು ನೀಡಲಾಗಿದೆ.
- 'ಸೌರಭ' – ಸಾಹಿತ್ಯದಲ್ಲಿ ನೀಡಿರುವ ಮಾಹಿತಿಯನ್ನಾಧರಿಸಿ ತರಗತಿವಾರು ವೇಳಾಪಟ್ಟಿಯನ್ನು ರೂಪಿಸಲಾಗಿದೆ.

# ಪ್ರವೇಶಕ್ಕೆ ಮುನ್ನ............

## ""ಈ ಸಂಚಿಕೆಯನ್ನು ಕುರಿತು"

- ☆ ಈ ಭಾಗದಲ್ಲಿ ಒಬ್ಬ ಶಿಕ್ಷಕ 3ನೇ ತರಗತಿಯ ಎಲ್ಲಾ ವಿಷಯಗಳನ್ನೂ ಹಾಗೂ 5ನೇ ತರಗತಿಯ ಕನ್ನಡ, ಗಣಿತ, ಭಾಗ–ಬಿಗೆ ಸಂಬಂಧಿಸಿದಂತೆ ಜೀವನ ವಿಜ್ಞಾನ, ಸಾ.ಉ.ಉ.ಕಾ., ಯೋಜನೆ ವಿಷಯಗಳ ಹಂಚಿಕೆ ಮಾಡಿಕೊಳ್ಳಲಾಗಿದೆ.
- ☆ 3ನೇ ತರಗತಿ ಭಾಷಾ ವಿಷಯದಲ್ಲಿ 80 ನಿಮಿಷದ 67 ಒಟ್ಟು ಅವಧಿಗಳಿದ್ದು 34 ನೇರ ಬೋಧನೆ ಮತ್ತು 33 ಅವಧಿಗಳನ್ನು ಸ್ವಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ.
- ☆ 3ನೇ ತರಗತಿ ಗಣಿತ ವಿಷಯಗಳಲ್ಲಿ 80 ನಿಮಿಷದ 34 ಒಟ್ಟು ಅವಧಿಗಳಿದ್ದು 23½ಅವಧಿಗಳನ್ನು ನೇರ ಬೋಧನೆಗೂ 11½ಅವಧಿಗಳನ್ನು ಸ್ವಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ.
- ☆ 3ನೇ ತರಗತಿ ಪರಿಸರ ಅಧ್ಯಯನಕ್ಕೆ ಸಂಬಂಧಿಸಿದಂತೆ 80 ನಿಮಿಷದ 56 ಅವಧಿಗಳಿದ್ದು 29 ಅವಧಿಗಳನ್ನು ನೇರ ಬೋಧನೆಗೆ 27 ಅವಧಿಗಳಲ್ಲಿ ಸ್ವಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ.
- ☆ Part-B ನಲ್ಲಿನ ವಿಷಯಗಳಲ್ಲಿ ಕೆಲವು ಅವಧಿಗಳು ಎರಡೂ ತರಗತಿಗಳಿಗೆ ಹೊಂದಾಣಿಕೆಯಾಗಿವೆ.
- ☆ 5ನೇ ತರಗತಿಯಗೆ ಕನ್ನಡ ವಿಷಯದಲ್ಲಿ 40 ನಿಮಿಷದ 79 ಅವಧಿಗಳಿದ್ದು 48 ಅವಧಿಗಳನ್ನು ನೇರ ಬೋಧನೆಗೂ 31 ಅವಧಿಗಳನ್ನು ಸ್ವಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ.
- ☆ ಗಣಿತ ವಿಷಯದಲ್ಲಿ 40 ನಿಮಿಷದ ಒಟ್ಟು 67 ಅವಧಿಗಳಿದ್ದು 37 ಅವಧಿಗಳನ್ನು ನೇರಬೋಧನೆಗೂ 30 ಅವಧಿಗಳನ್ನು ಸ್ವಕಲಿಕೆಗೂ ಅವಕಾಶ ಕಲ್ಪಿಸಲಾಗಿದೆ.
- ☆ 5ನೇ ತರಗತಿಯ ಪ್ರತಿ ವಿಷಯಗಳಿಗೂ ಪ್ರತಿ ಘಟಕಕ್ಕೆ "ಘಟಕ ಪರೀಕ್ಷೆ" ಮತ್ತು "ಪರಿಹಾರ ಬೋಧನೆಗೆ" ಪಾಠ ಹಂಚಿಕೆ ಅವಧಿಗಳಲ್ಲಿ ಅವಧಿಗಳನ್ನು ಸೇರ್ಪಡೆಗೊಳಿಸಲಾಗಿದೆ.
- ☆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ರೇಡಿಯೋ ಪಾಠ ನೀಡಿದಲ್ಲಿ ವೇಳಾಪಟ್ಟಿಯಲ್ಲಿ ಅಗತ್ಯ ಬದಲಾವಣೆ ಮಾಡಿಕೊಳ್ಳುವುದು. ಹಾಗಾದಲ್ಲಿ ಭಾಷೆಯ ವಿಷಯಕ್ಕೆ ನೀಡಲಾದ ಅವಧಿಗಳಲ್ಲಿ ಒಂದು ಅವಧಿಯನ್ನು ಕಡಿತ ಮಾಡಿಕೊಳ್ಳುವುದು. "ಕೇಳಿ–ಕಲಿ, ಚಿನ್ನರ ಚುಕ್ಕಿ, ಚುಕ್ಕಿ–ಚಿನ್ನ' ಮೊದಲಾದ ರೇಡಿಯೋ ಪಾಠ ಕೈಪಿಡಿಗಳಲ್ಲಿ ನೀಡಲಾದ ಪ್ರಸಾರಪೂರ್ವ, ಪ್ರಸಾರೋತ್ತರ ಇತ್ಯಾದಿ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು.

## ಬಹುವರ್ಗ ಬೋಧನಾ ಸಂಚಿಕೆ ವೇಳಾಪಟ್ಟಿ

## ತರಗತಿಗಳು :1 ರಿಂದ 5 ಶಿಕ್ಷಕರ ಸಂಖ್ಯೆ : 3

| | ವಾರಗಳು | ತರಗತಿ | 10.00 ರಿಂದ 11.30<br>ಅವಧಿ – 1 | | 11.30<br>11.40 | 11.40 ರಿಂದ 1.00<br>ಅವಧಿ – 2 | | 1.00<br>1.40 | 1.40 ರಿಂದ 3.00<br>ಅವಧಿ – 3 | | 3.00<br>3.10 | 3.10 ರಿಂದ 4.30<br>ಅವಧಿ – 4 | |
|---|---|---|---|---|---|---|---|---|---|---|---|---|---|
| | ಸೋಮವಾರ | 1 & 2 | ಕನ್ನಡ | ಕನ್ನಡ | ವಿರಾಮ | ಗಣಿತ | ಗಣಿತ | ಮಧ್ಯಾಹ್ನದ ಊಟ ವಿರಾಮ | ಜೀವನ ವಿಜ್ಞಾನ | ಜೀವನ ವಿಜ್ಞಾನ | ವಿರಾಮ | ಪರಿಸರ ಅಧ್ಯಯನ | ಪರಿಸರ ಅಧ್ಯಯನ |
| | | 3 | ಕನ್ನಡ | ಕನ್ನಡ | | ಜೀವನ ವಿಜ್ಞಾನ | ಜೀವನ ವಿಜ್ಞಾನ | | ಗಣಿತ | ಗಣಿತ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ |
| | | 4 | ಕನ್ನಡ | ಕನ್ನಡ | | ಜೀವನ ವಿಜ್ಞಾನ | ಜೀವನ ವಿಜ್ಞಾನ | | ಗಣಿತ | ಗಣಿತ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ |
| | | 5 | ಕನ್ನಡ | ಕನ್ನಡ | | ಗಣಿತ | ಕೇಳಿ–ಕಲಿ | | ಇಂಗ್ಲೀಷ್ | ಸಮಾಜ | | ವಿಜ್ಞಾನ | ಲಲಿತಕಲೆ / S.U.P.W. |
| | ಮಂಗಳವಾರ | 1&2 | ಕನ್ನಡ | ಕನ್ನಡ | | ಗಣಿತ | ಗಣಿತ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ | | ಲಲಿತಕಲೆ S.U.P.W. | ಲಲಿತಕಲೆ /S.U.P.W. |
| | | 3 | ಕನ್ನಡ | ಕನ್ನಡ | | ಜೀವನ ವಿಜ್ಞಾನ | ಜೀವನ ವಿಜ್ಞಾನ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ | | ಗಣಿತ | ಲಲಿತಕಲೆ /S.U.P.W. |
| | | 4 | ಕನ್ನಡ | ಕನ್ನಡ | | ಜೀವನ ವಿಜ್ಞಾನ | ಜೀವನ ವಿಜ್ಞಾನ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ | | ಗಣಿತ | ಲಲಿತಕಲೆ /S.U.P.W. |
| | | 5 | ಕನ್ನಡ | ಜೀವನ ವಿಜ್ಞಾನ | | ಗಣಿತ | ಜೀವನ ವಿಜ್ಞಾನ | | ಇಂಗ್ಲೀಷ್ | ಸಮಾಜ | | ವಿಜ್ಞಾನ | ವಿಜ್ಞಾನ |
| | ಬುಧವಾರ | 1&2 | ಕನ್ನಡ | ಕನ್ನಡ | | ಜೀವನ ವಿಜ್ಞಾನ | ಜೀವನ ವಿಜ್ಞಾನ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ | | ಲಲಿತಕಲೆ S.U.P.W. | ಲಲಿತಕಲೆ /S.U.P.W. |
| | | 3 | ಕನ್ನಡ | ಕನ್ನಡ | | ಜೀವನ ವಿಜ್ಞಾನ | ಲಲಿತಕಲೆ / S.U.P.W. | | ಗಣಿತ | ಕೇಳಿ–ಕಲಿ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ |
| | | 4 | ಕನ್ನಡ | ಕನ್ನಡ | | ಜೀವನ ವಿಜ್ಞಾನ | ಲಲಿತಕಲೆ /S.U.P.W. | | ಗಣಿತ | ಕೇಳಿ–ಕಲಿ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ |
| | | 5 | ಕನ್ನಡ | ಜೀವನ ವಿಜ್ಞಾನ | | ಗಣಿತ | ಕೇಳಿಕಲಿ | | ವಿಜ್ಞಾನ | ಸಮಾಜ | | ಸಮಾಜ | ಲಲಿತಕಲೆ /S.U.P.W. |
| | ಗುರುವಾರ | 1&2 | ಕನ್ನಡ | ಕನ್ನಡ | | ಗಣಿತ | ಗಣಿತ | | ಕನ್ನಡ | ಜೀವನ ವಿಜ್ಞಾನ | | ಲಲಿತಕಲೆ S.U.P.W. | ಮೌಲ್ಯ ಶಿಕ್ಷಣ |
| | | 3 | ಕನ್ನಡ | ಕನ್ನಡ | | ಗಣಿತ | ಗಣಿತ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ | | ಲಲಿತಕಲೆ S.U.P.W. | ಲಲಿತಕಲೆ / S.U.P.W. |
| | | 4 | ಕನ್ನಡ | ಕನ್ನಡ | | ಗಣಿತ | ಗಣಿತ | | ಲಲಿತಕಲೆ S.U.P.W. | ಲಲಿತಕಲೆ S.U.P.W. | | ಪರಿಸರ ಅಧ್ಯಯನ | ಪರಿಸರ ಅಧ್ಯಯನ |
| | | 5 | ಕನ್ನಡ | ಜೀವನ ವಿಜ್ಞಾನ | | ಗಣಿತ | ಲಲಿತಕಲೆ / S.U.P.W. | | ಇಂಗ್ಲೀಷ್ | ಸಮಾಜ | | ವಿಜ್ಞಾನ | ಲಲಿತಕಲೆ / S.U.P.W. |
| | ಶುಕ್ರವಾರ | 1&2 | ಕನ್ನಡ | ಕನ್ನಡ | | ಗಣಿತ | ಗಣಿತ | | ಲಲಿತಕಲೆ / S.U.P.W. | ಲಲಿತಕಲೆ / S.U.P.W. | | ಪರಿಸರ ಅಧ್ಯಯನ | ಪರಿಸರ ಅಧ್ಯಯನ |
| | | 3 | ಕನ್ನಡ | ಕನ್ನಡ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ | | ಲಲಿತಕಲೆ/ S.U.P.W. | ಕೇಳಿ–ಕಲಿ | | ಲಲಿತಕಲೆ / S.U.P.W. | ಲಲಿತಕಲೆ / S.U.P.W. |
| | | 4 | ಕನ್ನಡ | ಕನ್ನಡ | | ಪರಿಸರ ಅಧ್ಯಯನ | ಪರಿಸರ ಅಧ್ಯಯನ | | ಲಲಿತಕಲೆ/S.U.P.W. | ಕೇಳಿ–ಕಲಿ | | ಲಲಿತಕಲೆ /S.U.P.W. | ಮೌಲ್ಯ ಶಿಕ್ಷಣ |
| | | 5 | ಕನ್ನಡ | ಜೀವನ ವಿಜ್ಞಾನ | | ಗಣಿತ | ಯೋಜನೆ | | ಇಂಗ್ಲೀಷ್ | ಸಮಾಜ | | ವಿಜ್ಞಾನ | ಮೌಲ್ಯ ಶಿಕ್ಷಣ |
| | ಶನಿವಾರ | 1&2 | ಸಾಮೂಹಿಕ ಕಾರ್ಯ | ಕನ್ನಡ | | ಕನ್ನಡ | ಲಲಿತಕಲೆ / S.U.P.W | | ಲಲಿತಕಲೆ / S.U.P.W. | | | | |
| | | 3 | | ಕನ್ನಡ | | ಕನ್ನಡ | ಲಲಿತಕಲೆ / S.U.P.W | | ಲಲಿತಕಲೆ / S.U.P.W. | | | | |
| | | 4 | | ಕನ್ನಡ | | ಕನ್ನಡ | ಲಲಿತಕಲೆ / S.U.P.W | | ಲಲಿತಕಲೆ / S.U.P.W. | | | | |
| | | 5 | | ಜೀವನ ವಿಜ್ಞಾನ | | ಗಣಿತ | ಲಲಿತಕಲೆ / S.U.P.W | | ಲಲಿತಕಲೆ / S.U.P.W | | | | |

| ಶಿಕ್ಷಕರು | ಬೋಧಿಸುವ ತರಗತಿಗಳು | ಬೋಧಿಸುವ ವಿಷಯಗಳು I | II | III | IV | V |
|---|---|---|---|---|---|---|
| $T_1$ | 1 & 2 | ಎಲ್ಲಾ ವಿಷಯಗಳು (Part A & B) | ಎಲ್ಲಾ ವಿಷಯಗಳು (Part A & B) | – | – | – |
| $T_2$ | 3 & 5 | – | – | ಎಲ್ಲಾ ವಿಷಯಗಳು (Part A & B) | | ಕ; ಗ; ಜೀ.ವಿ., ಯೋಜನೆ |
| $T_3$ | 4 & 5 | – | – | – | ಎಲ್ಲಾ ವಿಷಯಗಳು (Part A & B) | ಇಂ ; ಸವಿ : ವಿಜ್ಞಾನ ಮೌ.ಶಿ ; ಲಕ\ S.U.P.W |

**ಭಾಗ – 1 : 1 ಮತ್ತು 2ನೇ ತರಗತಿ**

**ಭಾಗ – 2 : 3 ಮತ್ತು 5ನೇ ತರಗತಿ**

**ಭಾಗ – 3 : 4 ಮತ್ತು 5ನೇ ತರಗತಿ**

# ವಿಷಯವಾರು ನೇರಬೋಧನೆ ಹಾಗೂ ಸ್ವಕಲಿಕಾ ಅವಧಿ ಹಂಚಿಕೆ

| ಕ್ರ. ಸಂ. | ವಿಷಯ | ಪಾಠದ ಸಂಖ್ಯೆ | 3ನೇ ತರಗತಿ | | | | 5ನೇ ತರಗತಿ | | | |
|---|---|---|---|---|---|---|---|---|---|---|
| | | | ಪಾಠದ ಹೆಸರು | ಒಟ್ಟು ಅವಧಿ | ನೇರ ಬೋಧನೆ | ಸ್ವಕಲಿಕೆ | ಪಾಠದ ಹೆಸರು | ಒಟ್ಟು ಅವಧಿ | ನೇರ ಬೋಧನೆ | ಸ್ವಕಲಿಕೆ |
| 01 | ಕನ್ನಡ | 01 | ಬಾವಿಯಲ್ಲಿ ಚಂದ್ರ (ಕವನ) | 6 | 2½ | 3½ | ಕವನ | 05 | 02 | 03 |
| | | 02 | ಉಪಾಯ ಬಲ್ಲವನಿಗೆ ಅಪಾಯವಿಲ್ಲ | 6 | 3½ | 2½ | ಪಂಜೆಮಂಗೇಶರಾಯರು | 12 | 06 | 06 |
| | | 03 | ಬುದ್ಧಿವಂತ ಮಂತ್ರಿ | 11 | 5 | 6 | ಸಂಗೊಳ್ಳಿ ರಾಯಣ್ಣ | 13 | 08 | 05 |
| | | 04 | ನಿಯಮ ಪಾಲನೆ | 12 | 7 | 5 | ಮಲೆನಾಡ ಸಿರಿ, ಜಲಪಾತ | 19 | 11 | 08 |
| | | 05 | ಗಗನಗುಡಿ (ಕವನ) | 9 | 5 | 4 | ನಮ್ಮ ಕನಸು | 12 | 08 | 04 |
| | | 06 | ಅಕ್ಕನಿಗೊಂದು ಪತ್ರ | 11 | 5 | 6 | ಆಡಿ ನಲಿಯೋಣ | 12 | 08 | 04 |
| | | 07 | ಜೇನು | 12 | 6 | 6 | ವ್ಯಾಕರಣಾಂಶ | 06 | 05 | 01 |
| 02 | ಗಣಿತ | 01 | ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು | 20 | 14½ | 5½ | ಸಂಖ್ಯೆಗಳು ಮತ್ತು ಪೂರ್ಣಾಂಕಗಳು | 16 | 10 | 06 |
| | | 02 | ಗಣಿತದ ಮೂಲಕ್ರಿಯೆಗಳು | 14 | 9 | 5 | ವಿವಿಧ ಸಂಖ್ಯೆಗಳು ಮತ್ತು ಸಂಖ್ಯಾ ಗಣಗಳು | 16 | 09 | 07 |
| | | 03 | | | | | ಭಿನ್ನರಾಶಿ, ದಶಮಾಂಶ ಮತ್ತು ಶೇಕಡಾ | 16 | 08 | 08 |
| | | 04 | | | | | ಮೂಲ ಪ್ರಕ್ರಿಯೆಗಳು | 10 | 05 | 05 |
| | | 05 | | | | | ಕೋನಗಳ ವಿಧಗಳು ಮತ್ತು ರಚನೆ | 09 | 05 | 04 |
| 03 | ಪರಿಸರ ಅಧ್ಯಯನ | 01 | ಜೀವಿಗಳು–ನಿರ್ಜೀವಿಗಳು | 7 | 3½ | 3½ | ಸಂಚಿಕೆ 3ರ ಭಾಗ 3ರಲ್ಲಿ ಪರಿಸರ ಅಧ್ಯಯನದ ಅವಧಿ ಹಂಚಿಕೆಯಾಗಿದೆ. | | | |
| | | 02 | ನಮ್ಮ ಸುತ್ತಲಿನ ಜೀವಿಗಳು | 7 | 4 | 3 | | | | |
| | | 03 | ಪ್ರಾಣಿ–ಪ್ರಪಂಚ | 7 | 4½ | 2½ | | | | |
| | | 04 | ಪರಿಸರದಲ್ಲಿ ವೈವಿಧ್ಯ | 7 | 3½ | 3½ | | | | |
| | | 05 | ನಮ್ಮ ಜ್ಞಾನೇಂದ್ರಿಯಗಳು | 10 | 5 | 5 | | | | |
| | | 06 | ನಮ್ಮ ಹಲ್ಲುಗಳು | 10 | 3½ | 3½ | | | | |
| | | 07 | ನಮ್ಮ ಆಹಾರ | 10 | 2½ | 2½ | | | | |
| | | 08 | ವಸ್ತುಗಳ ಗುಣಗಳು ಮತ್ತು ಸ್ಥಿತಿಗಳು | 6 | 2½ | 3½ | | | | |
| 04 | ಜೀವನ ವಿಜ್ಞಾನ | – | – | 34 | 24 | 10 | ಜೀವನ ವಿಜ್ಞಾನ | 54 | 22 | 32 |
| 05 | ಕೇಳಿಕಲಿ | – | – | 10 | – | – | ಸಾ.ಉ.ಉ.ಕಾ | 11 | 02 | 09 |
| 06 | ಸಾ.ಉ.ಉ.ಕಾ/ ಲಲಿತಕಲೆ | – | – | 44 | 29 | 15 | ಕೇಳಿ ಕಲಿ | 20 | – | 20 |
| 07 | ಮೌಲ್ಯ ಶಿಕ್ಷಣ | – | – | 5½ | 5½ | – | ಯೋಜನೆ | 11 | 00 | 11 |